## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 790/2017

ಸಾಕ್ಷಿಗೆ ದಿನಾಂಕ 28-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 10 P.W.: 7

| | | |
|---|---|---|
| ಹೆಸರು | : | ಚೌಟಗಿ ಉಮೇಶ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬನ್ನಿಕಲ್ಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿ ನನಗೆ ಪರಿಚಯ ಇರುತ್ತಾರೆ. ಚಾಸಾ-1 ನನಗೆ ಗೊತ್ತು. ಚಾಸಾ-1 ರವರು ಚಾಸಾ-6 ರವರ ಮಗಳು ಇರುತ್ತಾರೆ. ಚಾಸಾ-7, 8, 9, 11 ರವರು ನಮ್ಮ ಗ್ರಾಮದವರು ಇರುತ್ತಾರೆ. ಆರೋಪಿ ಮತ್ತು ಚಾಸಾ-1 ರವರ ಮದುವೆಯಾಗಿರುವ ವಿಚಾರ ನನಗೆ ಗೊತ್ತು. ಆದರೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ19-04-2005 ರಂದು ಚಾಸಾ-6 ರವರು ತನ್ನ ಮಗಳಾದ ಚಾಸಾ-1 ರವರ ವಿವಾಹ ಆರೋಪಿತನ ಜೊತೆ ಗೊತ್ತು ಮಾಡಿದ್ದು ಸದರಿ ಮದುವೆಯು ಶ್ರೀ ಮಹಾದೇವ ತಾತ ಮಠ ಮೋರಿಗೇರಿಯಲ್ಲಿದ್ದು ಸದರಿ ಮದುವೆಗೆ ಬರಲು ನಮಗೆ ಕೇಳಿಕೊಂಡಿದ್ದರಿಂದ ನಾನು ಮತ್ತು ನಮ್ಮ ಗ್ರಾಮದ ಚಾಸಾ-4, 9, 12, 8, 13 ರವರು ಸೇರಿ ಸದರಿ ಮದುವೆಗೆ ಹೋಗಿದ್ದು ನಮ್ಮ ಸಮ್ಮುಖದಲ್ಲಿ ಅವರ ಮದುವೆ ನೇರವೇರಿರುತ್ತದೆಂದರೆ ಸರಿಯಲ್ಲ. ಆರೋಪಿತನು ಚಾಸಾ-1 ರವರ ಜೊತೆ ಸ್ವಲ್ಪ ದಿನ ಸುಲಲಿತವಾಗಿ ಬಾಳುವೆ ಮಾಡಿದ್ದು ಇರುತ್ತದೆ ಅವರಿಗೆ ಒಂದು ಹೆಣ್ಣು ಮಗಳು ಅಕ್ಷಿತಾ ಅಂತಾ ಇರುತ್ತಾಳೆಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ಆರೋಪಿತನು ಮಧ್ಯಪಾನ ಮಾಡುವುದು ಮತ್ತು ಇತರೆ ದುಶ್ಚಟಗಳಿಗೆ ಬಲಿಯಾಗಿ ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ಅವಳಿಗೆ ಹೊಡೆಬಡಿ ಮಾಡಿ ಅವಾಚ್ಯ ಶಬ್ದದಿಂದ ಬೈದು ಪ್ರಾಣಬೆದರಿಕೆ

ಹಾಕಿರುತ್ತಾನೆ ಮತ್ತು ಅವಳ ಶೀಲದ ಬಗ್ಗೆ ಶಂಕಿಸಿರುತ್ತಾನಂತಾ ಚಾಸಾ-1 ರವರು ನ್ಯಾಯಾಲಯದಲ್ಲಿ ದೂರು ದಾಖಲಿಸಿರುವ ವಿಚಾರ ನನಗೆ ತಿಳಿದಿರುತ್ತದೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ಪೋಲೀಸರ ಮುಂದೆ ದಿಃ24-12-2016 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ